ಅಧ್ಯಕ್ಷರು: ಎಲ್ಲಾ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

3. ಪ್ರಕಟಣೆ

ಅಧ್ಯಕ್ಷರು: ಒಂದು ಪ್ರಕಟಣೆ: ಪ್ರಶ್ನೋತ್ತರ ವೇಳೆಯಲ್ಲಿ ಶಾಸಕರು ಉಪಪ್ರಶ್ನೆಗಳನ್ನು ಕೇಳುವ ವೇಳೆಗೆ ಮಾನ್ಯ ಸಚಿವರು ಉತ್ತರವನ್ನು ಕೊಡುವ ವೇಳೆಯಲ್ಲಿ ಸಮಯವನ್ನು ಸ್ವಲ್ಪ ಉಳಿಸಿಕೊಟ್ಟರೆ ನನಗೆ ಅನುಕೂಲವಾಗುತ್ತದೆ. ಆಗ ನಾನು ಒಂದು ಗಂಟೆಯೊಳಗೆ ಪ್ರಶ್ನೋತ್ತರ ಅವಧಿಯನ್ನು ಮುಗಿಸಬಹುದು.

11.30

4. ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

(ಬೇಡಿಕೆ ಸಂಖ್ಯೆ 28, 29, 52 ಮತ್ತು 53)

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಮೂರು ವರ್ಷಗಳ ನಂತರ ನನಗೆ ಉತ್ತರ ಕೊಡುವಂತಹ ಅವಕಾಶವನ್ನು ನನಗೆ ಒದಗಿಸಿಕೊಟ್ಟ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಕಳೆದ ಮೂರು ವರ್ಷಗಳಿಂದ ಇಂತಹ ಚರ್ಚೆ ಮತ್ತು ಅದಕ್ಕೆ ಉತ್ತರ ಕೊಡುವ ನಿಟ್ಟಿನಲ್ಲಿ ಬೆಳಕನ್ನು ಚೆಲ್ಲುವಂತಹ ಪ್ರಯತ್ನ ನಡೆದಿರಲಿಲ್ಲ. ಆದರೆ ಈ ವರ್ಷ ನಾಲ್ಕು ಶಾಸಕರುಗಳಾದ ಡಿ.ಆರ್.ಪಾಟೀಲ್, ಅರಗಜ್ಞಾನೇಂದ್ರ, ಶ್ರೀಮತಿ ಪ್ರಮೀಳಾ ನೇಸರ್ಗಿ ಮತ್ತು ಕೆ.ಎಸ್.ಪುಟ್ಟಣ್ಣಯ್ಯನವರು ಈ ಇಲಾಖೆಯ ಬಗ್ಗೆ ಚೆನ್ನಾಗಿ ಬೆಳಕನ್ನು ಚೆಲ್ಲುವಂತೆ ಮಾತನಾಡಿದ್ದಾರೆ. ಆದರೆ ಶಿವಪ್ಪನವರು ಏನೋ ಮಾತನಾಡಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಈ ಕಡೆ ಅವರು ಕುಳಿತಿದ್ದರೆ ಮಾತನಾಡುತ್ತಿದ್ದರು. ಆದರೆ ಈಗ ಅವರು ಸರ್ಕಾರದ ಜೊತೆ ಇರುವುದರಿಂದ ಅದರಲ್ಲೂ ಅವರ ಜೊತೆ ಗರಿಷ್ಟ ಸಂಬಂಧ ಇದ್ದಮೇಲೆ ಅವರು ಹೇಗೆ ಮಾತನಾಡುತ್ತಾರೆ? ಅವರು ಏನು ಇದ್ದರೂ ಉತ್ತರ ಕೊಡುವುದಕ್ಕೆ ಅವಕಾಶವಾಗುವಂತಹ ಸ್ಥಾನದ ಚಾನ್ಸ್‌ಗೆ ಕಾಯುತ್ತಿದ್ದಾರೆ. ಚರ್ಚೆಗೆ ಅಲ್ಲ.

ಅಧ್ಯಕ್ಷರು: ಮಾನ್ಯ ಶಿವಪ್ಪನವರು ಮತ್ತು ಮಾಧುಸ್ವಾಮಿಯವರು ಇಬ್ಬರು ಮಧ್ಯದಲ್ಲಿದ್ದಾರೆ. ಅವರು ಈಕ್ವಿಟಿ ಸೆಂಟರ್.

ಶ್ರೀ ಎಸ್.ಎಸ್.ಪಾಟೀಲ್: ಅವರು ಮಧ್ಯದಲ್ಲಿ ಕುಳಿತರು. ಬ್ಯಾಲೆನ್ಸ್‌ನಲ್ಲಿ ಈ ಕಡೆ